ಬೆಳಗ್ಗೆ ಎದ್ದಾಗ ಎಂಟು ಗಂಟೆಯಾಗಿತ್ತು. ಭಾನುವಾರವಾದ್ದರಿಂದ ಗಡಿಬಿಡಿಯಿರಲಿಲ್ಲ. ತಮ್ಮ ತಾರಾನಾಥ ಚಹಾ ಮಾಡಿಕೊಂಡು ಕಾಯುತ್ತಿದ್ದ. ಎದ್ದವನಿಗೆ ಲೋಟದ ತುಂಬಾ ಚಹಾ ಬಗ್ಗಿಸಿ ಕೊಡುತ್ತಾ, ''ಯಾಕಣ್ಣ ಒಂಥರ ಇದ್ದೀಯ. ಮೈ ಹುಷಾರಿಲ್ವಾ? ಡಾಕ್ಟರ್ ಶಾಪಿಗೆ ಹೋಗ್ಬಿಟ್ ಬರೋಣ ನಡಿ...'' ಎಂದಿದ್ದ. ''ಅಯ್ಯೋ ನಂಗೇನೂ ಆಗಿಲ್ಲ ತಾರಾ, ಯಾಕೋ ರಾತ್ರಿ ಸರಿಯಾಗಿ ನಿದ್ದೆ ಹತ್ತಲಿಲ್ಲ. ಮಧ್ಯಾಹ್ನ ಸ್ವಲ್ಪ ಮಲಗಿದ್ರೆ ಸರಿಹೋಗ್ತದೆ ಬಿಡು...'' ಎಂದು ಚಹಾ ಕುಡಿದು ಮುಖ ತೊಳೆದು ಬಂದಿದ್ದ. ಅಷ್ಟರಲ್ಲಿ ತಾರಾನಾಥನ ಫೋನ್ ರಿಂಗಾಗಿತ್ತು. ''ಅಣ್ಣ ಊರಿನಿಂದ ಫೋನು'' ಎಂದು ತಾರಾನಾಥ ಫೋನನ್ನು ರಾಮ್ ಲಾಲನಿಗೆ ಕೊಟ್ಟಿದ್ದ. ಆ ಕಡೆಯಿಂದ ಅಪ್ಪ ಆತಂಕದ ಧ್ವನಿಯಲ್ಲಿ, ''ರಾಮು ಬೆಳಗ್ಗೇನೆ ಫೋನ್ ಮಾಡಿದ್ದೆ, ಅಣ್ಣ ಇನ್ನೂ ಮಲಗಿದಾನೆ ಅಂತ ಹೇಳಿದ ತಾರಾ. ದೇಶದ ಎಲ್ಲಾ ಶಹರುಗಳಲ್ಲಿ ಅದೆಂಥದ್ದೊ ಗುಣಪಡಿಸಲಾಗದಂಥ ರೋಗ ಹರಡುತ್ತಾ ಇದೆಯಂತೆ. ಇಲ್ಲೆಲ್ಲಾ ಅದರದ್ದೇ ಮಾತು. ನೀವು ತುಂಬಾ ಜೋಪಾನ. ಹೆಂಗಾದ್ರಾಗ್ಲಿ ತಾರಾನ ಕರೆದುಕೊಂಡು ರೈಲು ಹತ್ತಿ ಬಂದು ಬಿಡು. ಕಾಯಿಲೆ ಶಮನ ಆದ ಮೇಲೆ ಹೋದರಾಯಿತು. ನಿಮ್ಮಮ್ಮ ತುಂಬಾನೆ ಎದೆ ಬಿದ್ದವ್ಳೆ...'' ಎಂದು ಮಾತನಾಡಿದ್ದ. ಅಮ್ಮ ಕೂಡ ಅಪ್ಪ ಹೇಳಿದ್ದನ್ನೇ ಅನುಮೋದಿಸಿ ಕಕ್ಕುಲತೆಯಿಂದ ಮಾತನಾಡಿದ್ದಳು. ರಾಮ್ ಲಾಲ್ ಅಂಥದ್ದೇನು ಆಗಲಾರದೆಂದು, ಅಂಥ ಸಂದರ್ಭ ಬಿದ್ದರೆ ಊರಿಗೆ ಬರುವುದಾಗಿ ಸಮಾಧಾನ ಹೇಳಿದ್ದ. ಸಣ್ಣದಾಗಿ ತಲೆ ನೋಯುತ್ತಿದ್ದರಿಂದ ಮಧ್ಯಾಹ್ನ ಒಂದರ್ಧ ಗಂಟೆ ಹೊರಗೆ ಹೋಗಿ ಓಡಾಡಿಕೊಂಡು ತಲೆ ನೋವಿನ ಮಾತ್ರೆಯನ್ನು ತಂದು ಊಟ ಮಾಡಿ, ಮಾತ್ರೆ ನುಂಗಿ ಸ್ವಲ್ಪ ಹೊತ್ತು ಮಲಗಿದ್ದ. ಎದ್ದಾಗ ತಲೆ ನೋವು ಮಾಯವಾಗಿತ್ತು. ಊರಿನಿಂದ ತಂದಿದ್ದ ಹಳೆಯ ಕಥೆ ಪುಸ್ತಕಗಳನ್ನು ತೆಗೆದು ಮೂರ್ನಾಲ್ಕು ಕಥೆಗಳನ್ನು ಓದಿದ. ಒಂದಿಷ್ಟು ಸಮಾಧಾನವಾಗಿತ್ತು. ಅವೊತ್ತು ರಾತ್ರಿ ನಿದ್ದೆ ಬೇಗನೆ ಆವರಿಸಿತ್ತು. ಅಂದಿನ ಅಡುಗೆ ಕೆಲಸವನ್ನು ಪೂರ್ಣವಾಗಿ ತಾರಾನಾಥನೇ ವಹಿಸಿಕೊಂಡಿದ್ದ.

ಮಾರನೆಯ ದಿನ ಸೋಮವಾರ. ರಾಮ್ ಲಾಲ್ ಬೇಗನೆ ಎದ್ದು ರೆಡಿಯಾಗಿ ಒಂಬತ್ತು ಗಂಟೆಗೆಲ್ಲಾ ಆನಂದ ವಿಹಾರ್ ಬಸ್‌ಸ್ಟ್ಯಾಂಡ್ ತಲುಪಿದ. ಜನಸಂಖ್ಯೆ ಅಷ್ಟೇನು ದಟ್ಟವಾಗಿರಲಿಲ್ಲ. ಅವನ ಕಣ್ಣುಗಳು ಆನಂದಿಗಾಗಿ ಹುಡುಕಾಡಿದ್ದವು. ಎಷ್ಟು ಹುಡುಕಾಡಿದರೂ ಅವನ ಕಣ್ಣುಗಳಿಗೆ ಅವಳು ಬಿದ್ದಿರಲಿಲ್ಲ. ಆ ಸಮಯದ ಬಸ್ ಖಾಲಿ ಬಂದರೂ ಹತ್ತಿರಲಿಲ್ಲ. ಹತ್ತು ನಿಮಿಷದ ಬಳಿಕ ಬಂದ ಮತ್ತೊಂದು ಬಸ್ಸಿಗೆ ವಿಧಿಯಿಲ್ಲದೆ ಹತ್ತಿದ. ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸುಮಾರು ಕಾರ್ಮಿಕರು ಬಂದಿರಲಿಲ್ಲ. ಮಧ್ಯಾಹ್ನ ಊಟ ಮುಗಿದ ಮೇಲೆ ಸೂಪರ್ ವೈಸರ್ ಬಂದಿದ್ದರು. ಅವರ ಮುಖದಲ್ಲಿ ಗಾಬರಿ ತುಂಬಿಕೊಂಡಿತ್ತು. ''ರಾಮ್ ಲಾಲ್ ಕೊರೊನಾ ಕಾಯಿಲೆ ವಿಪರೀತವಾಗಿ ಹರಡುತ್ತಿದೆಯಂತೆ. ಅದನ್ನು ಕಂಟ್ರೋಲ್ ಮಾಡಲು ನಾಳೆಯಿಂದ ದೇಶದಾದ್ಯಂತ ಸರ್ಕಾರ ಕರ್ಫ್ಯೂ ಘೋಷಿಸಿದೆ. ಅಂದರೆ ಇಡೀ ದೇಶ ಲಾಕ್ ಡೌನ್ ಆಗುತ್ತದೆ. ಹಾಗಾಗಿ ನಮ್ಮ ಫ್ಯಾಕ್ಟರಿಯನ್ನೂ ಮುಚ್ಚಲಾಗುತ್ತದೆ. ರೈಲು, ಬಸ್ಸಿನಿಂದ ಹಿಡಿದು ಯಾವ ವಾಹನಗಳೂ ಓಡಾಡುವಂತಿಲ್ಲ. ಮುಖಕ್ಕೆ ಮಾಸ್ಕ್ ಹಾಕಿಕೊಂಡು ತಿರುಗಾಡಬೇಕಂತೆ. ತಿಂಗಳ ಕಾಲ ಈ ನಿರ್ಬಂಧ. ಆಮೇಲೆ ಪರಿಸ್ಥಿತಿ ನೋಡಿಕೊಂಡು ಸರ್ಕಾರ ಕ್ರಮ ಕೈಕೊಳ್ಳುತ್ತದಂತೆ. ಈಗ ತಾನೇ ಎಲ್ಲಾ ಚಾನೆಲ್‌ಗಳಲ್ಲೂ ಇದೇ ಸುದ್ದಿ. ನೀನು ಬಸ್ ಹತ್ತಿ ಮನೆಗೆ ಹೋಗಿಬಿಡು. ಸಂಜೆಯೊಳಗೆ ಬಸ್ ಸಂಚಾರ ನಿಂತರೂ ನಿಲ್ಲಬಹುದು...'' ಎಂದು ಒಂದೇ ಸಮನೆ ಹೇಳಿದಾಗ ರಾಮ್ ಲಾಲನ ಎದೆ ಧಸಕ್ಕೆಂದಿತು. ಇವೊತ್ತಿನ್ನೂ ಇಪ್ಪತ್ತೊಂದನೆ ತಾರೀಕು. ಇನ್ನು ಹತ್ತು ದಿನ ಕಳೆದರೆ ಸಂಬಳ ಬರುತ್ತಿತ್ತು. ''ಮತ್ತೆ ಈ ತಿಂಗಳ ಸಂಬಳ'' ಕೇಳಿದ್ದ ರಾಮ್ ಲಾಲ್. ''ಅರೆ ರಾಮ್ ಲಾಲ್ ನೀನೆಂಥ ಮನುಷ್ಯನಯ್ಯಾ, ಮೊದಲು ಪ್ರಾಣ ಉಳಿಸ್ಕೊ ಬದುಕಿದ್ರೆ ನಿನ್ ಸಂಬಳ ಎಲ್ಲೂ ಓಡೋಗಲ್ಲ...'' ಎಂಬ ಧರ್ಮ ಪಾಲರ